"SEPT- 2023 Makeup SEE"

ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/5/ಇಸಿಎಸ್(1)/2023

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು-560001
ದಿನಾಂಕ:19.08.2023

ಸುತ್ತೋಲೆ

ವಿಷಯ: 2020-21 ನೇ ಶೈಕ್ಷಣಿಕ ಸಾಲಿನಿಂದ ಜಾರಿಯಲ್ಲಿರುವ C-20 ಪಠ್ಯಕ್ರಮದಲ್ಲಿ ಪ್ರವೇಶ ಪಡೆದು 1 ರಿಂದ 6ನೇ ಸೆಮಿಸ್ಟರ್ ಗಳಲ್ಲಿ ಅನುತ್ತೀರ್ಣಗೊಂಡಿರುವ ಮತ್ತು Makeup CIE ಕಿರು ಪರೀಕ್ಷೆಗಳಲ್ಲಿ ಕನಿಷ್ಠ ಶೇ.40 ಆಂತರಿಕ ಅಂಕಗಳನ್ನು ಪಡೆದಿರುವ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಹಾಗೂ ಥಿಯರಿ ವಿಷಯಗಳಲ್ಲಿ Makeup (SEE) ಪರೀಕ್ಷೆಗಳ ವೇಳಾಪಟ್ಟಿಗಳನ್ನು ಪ್ರಕಟಿಸುವ ಕುರಿತು.

ಉಲ್ಲೇಖ: 1) ಈ ಕಛೇರಿ ಜ್ಞಾಪನ ಸಂಖ್ಯೆ:ಬಿಟಿಇ/05/ಇಎಪಿ/2022 ದಿನಾಂಕ: 19.08.2023
2) ಈ ಕಛೇರಿ ಸುತ್ತೋಲೆ ಸಂಖ್ಯೆ:ಬಿಟಿಇ/5/ಇಸಿಎಸ್(1) 2023 ದಿ:17.07.2023
3) ಈ ಕಛೇರಿ ಸುತ್ತೋಲೆ ಸಂಖ್ಯೆ:ಬಿಟಿಇ/5/ಇಸಿಎಸ್(1) 2023 ದಿ:20.07.2023

***********

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, 2020-21ನೇ ಶೈಕ್ಷಣಿಕ ಸಾಲಿನಿಂದ ಜಾರಿಯಲ್ಲಿರುವ C-20 ಪಠ್ಯಕ್ರಮದಲ್ಲಿ ಪ್ರವೇಶ ಪಡೆದು 1 ರಿಂದ 6ನೇ ಸೆಮಿಸ್ಟರ್ ಗಳಲ್ಲಿನ ವಿವಿಧ ಪ್ರಾಯೋಗಿಕ ಹಾಗೂ ಥಿಯರಿ ಪಠ್ಯ ವಿಷಯಗಳಲ್ಲಿ ಅನುತ್ತೀರ್ಣಗೊಂಡಿರುವ ಮತ್ತು ದಿನಾಂಕ:10.08.2023 ರಿಂದ 17.08.2023 ರವರೆಗೆ ನಡೆಸಲಾದ Makeup CIE ಕಿರು ಪರೀಕ್ಷೆಗಳಲ್ಲಿ ಕನಿಷ್ಠ ಶೇ.40 ಆಂತರಿಕ ಅಂಕಗಳನ್ನು ಗಳಿಸಿ ಅಂತಿಮ ಪರೀಕ್ಷೆಗಳಿಗೆ ಅರ್ಹತೆ ಹೊಂದಿರುವ ವಿದ್ಯಾರ್ಥಿಗಳಿಗೂ ಸಹಿತ ಪ್ರಾಯೋಗಿಕ ಹಾಗೂ ಥಿಯರಿ ವಿಷಯಗಳಲ್ಲಿ Makeup (SEE) ಪರೀಕ್ಷೆಗಳನ್ನು ಬಿಟಿಇಲಿಂಕ್ಸ್ ನಲ್ಲಿ ಪ್ರಕಟಿಸಲಾಗುವ ವೇಳಾಪಟ್ಟಿಯನುಸಾರ ನಡೆಸಲಾಗುವುದು. ಪ್ರಯುಕ್ತ ಉಲ್ಲೇಖ (1) ರ ಜ್ಞಾಪನದನ್ವಯ ಸೆಪ್ಟೆಂಬರ್ 2023 Makeup (SEE) ಪರೀಕ್ಷೆಗಳಿಗೆ ನೋಂದಾಯಿಸಲಿರುವ ಅಭ್ಯರ್ಥಿಗಳ ವಿವರಗಳನ್ನು ಬಿಟಿಇಲಿಂಕ್ಸ್ ವೆಬ್ ಪೋರ್ಟಲ್ ನಲ್ಲಿ ಇಂದೀಕರಿಸಲು ಸೂಚಿಸಲಾಗಿದೆ.

Makeup (SEE) ಪ್ರಾಯೋಗಿಕ ಪರೀಕ್ಷೆಗಳನ್ನು **ದಿನಾಂಕ:04.09.2023 ರಿಂದ 09.09.2023** ರವರೆಗೆ ಆಯಾ ಸಂಸ್ಥೆಗಳಲ್ಲಿಯೇ ನಡೆಸುವುದು. ತಮ್ಮ ಸಂಸ್ಥೆಯಲ್ಲಿ ನೋಂದಾಯಿಸಲಿರುವ ಅಭ್ಯರ್ಥಿಗಳನುಸಾರ ಪ್ರಾಯೋಗಿಕ ಪರೀಕ್ಷೆಗಳ ವೇಳಾಪಟ್ಟಿಯನ್ನು ಸಿದ್ಧಪಡಿಸಿ ಪರೀಕ್ಷೆಗಳನ್ನು ಸಮರ್ಪಕವಾಗಿ ನಡೆಸಲು ಮುಖ್ಯ ಅಧೀಕ್ಷಕರುಗಳಿಗೆ ತಿಳಿಸಲಾಗಿದೆ. ಪ್ರಾಯೋಗಿಕ ಪರೀಕ್ಷಕರ ಹಂಚಿಕೆಗಾಗಿ ಆಯಾ ವಿಭಾಗಗಳ ವಿಷಯ ಪರಿವೀಕ್ಷಕರುಗಳ ಸಮಿತಿಗಳ ಅಧ್ಯಕ್ಷರುಗಳನ್ನು, ನೀಡಲಾಗುವ ಇ-ಮೇಲ್ ವಿಳಾಸ ಮತ್ತು ಮೊಬೈಲ್ ಸಂಖ್ಯೆ ಮುಖಾಂತರ ಸಂಪರ್ಕಿಸಲು ಸೂಚಿಸಲಾಗಿದೆ.

Makeup (SEE) ಥಿಯರಿ ಪರೀಕ್ಷೆಗಳಿಗಾಗಿ ನೋಂದಾಯಿಸಲಿರುವ ವಿದ್ಯಾರ್ಥಿಗಳ ಸಂಖ್ಯೆಗಳಿಗನುಗುಣವಾಗಿ ಆಡಳಿತಾತ್ಮಕ ಹಿತದೃಷ್ಟಿಯಿಂದ Makeup (SEE) ಥಿಯರಿ ಪರೀಕ್ಷೆಗಳನ್ನು **ಸರ್ಕಾರಿ ಪಾಲಿಟೆಕ್ನಿಕ್ ಪರೀಕ್ಷಾ ಕೇಂದ್ರಗಳಲ್ಲಿ ಮಾತ್ರ ದಿನಾಂಕ:11.09.2023 ರಿಂದ 20.09.2023** ರವರೆಗೆ ನಡೆಸಲಾಗುವುದು. Makeup (SEE) ಥಿಯರಿ ಪರೀಕ್ಷೆಗಳ ವೇಳಾಪಟ್ಟಿಯನ್ನು ಬಿಟಿಇಲಿಂಕ್ಸ್ ವೆಬ್ ಪೋರ್ಟಲ್ ನಲ್ಲಿ ಪ್ರಕಟಿಸಲಾಗುವುದು.

ಉಲ್ಲೇಖ (2) & (3) ರ ಸುತ್ತೋಲೆಗಳನ್ವಯ Makeup CIE ಕಿರು ಪರೀಕ್ಷೆಗಳಲ್ಲಿ ಕನಿಷ್ಠ ಶೇ.40 ಆಂತರಿಕ ಅಂಕಗಳನ್ನು ಗಳಿಸಿ ಅಂತಿಮ ಪರೀಕ್ಷೆಗಳಿಗೆ ಅರ್ಹತೆ ಹೊಂದಿರುವ ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ನಿಯಮಾನುಸಾರ ಆಂತರಿಕ ಅಂಕಗಳ ವಹಿಯಲ್ಲಿ **"ಆಗಸ್ಟ್/ಸೆಪ್ಟೆಂಬರ್ 2023 Makeup CIE"** ಶೀರ್ಷಿಕೆಯಡಿ ನಮೂದಿಸಿ ಆಂತರಿಕ ಅಂಕಗಳ ಪರಿವೀಕ್ಷಕರಿಂದ ಪರಿಶೀಲಿಸಲ್ಪಟ್ಟ ನಂತರ ಬಿಟಿಇಲಿಂಕ್ಸ್ ವೆಬ್ ಪೋರ್ಟಲ್ ಮುಖಾಂತರ ಆನ್ ಲೈನ್ ನಲ್ಲಿ ಅಪ್ ಲೋಡ್ ಮಾಡಲು ಸೂಚಿಸಲಾಗಿದೆ.

**ವಿ.ಸೂ: Makeup(SEE) ಥಿಯರಿ ಪರೀಕ್ಷೆಗಳ ಉತ್ತರಪತ್ರಿಕೆಗಳ ಮರುಮೌಲ್ಯಮಾಪನಕ್ಕೆ ಅವಕಾಶವಿರುವುದಿಲ್ಲ.**

ಕಾರ್ಯದರ್ಶಿ

ಇವರಿಗೆ,
ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಗಳ ಮುಖ್ಯ ಅಧೀಕ್ಷಕರು/ ಪ್ರಿನ್ಸಿಪಾಲರುಗಳಗೆ- ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ

ಪ್ರತಿ: 1. ಇ-ಗವರ್ನನ್ಸ್ ವಿಭಾಗ – ವೆಬ್ ಸೈಟ್ ನಲ್ಲಿ ಪ್ರಕಟಿಸಲು
2. ಗಣಕ ಕೇಂದ್ರ – ಬಿಟಿಇಲಿಂಕ್ಸ್ ವೆಬ್ ಪೋರ್ಟಲ್ ನಲ್ಲಿ ಪ್ರಕಟಿಸಲು ಮತ್ತು ಅಗತ್ಯಕ್ರಮಕ್ಕಾಗಿ
3. ಆಯುಕ್ತರ ಆಪ್ತಶಾಖೆ 4. ನಿರ್ದೇಶಕರ ಆಪ್ತಶಾಖೆ 5.ಇಎಪಿ ವಿಭಾಗ